# ಕೆಂಪು ಅಧರದ ಸುಂದರಿ!





ಇದೋ ಇಲ್ಲಿದೆ, ಪ್ರೇಮಿಗಳ ದಿನದಂದು ನಿಮ್ಮ ಸಂಗಾತಿಗಳಿಗೆ ಹೃದಯ ತುಂಬಿ ನೀಡಬಹುದಾದ ಚೆಂಗುಲಾಬಿಯನ್ನೂ ಮೀರಿಸಬಲ್ಲ ಮುದ್ದಾದ ಅಧರದಂಥ ಪುಷ್ಪ! ಒಂದೇ ನೋಟಕ್ಕೆ ಮನಸೆಳೆಯಬಲ್ಲದು!

ಸಸ್ಯ ಲೋಕದ ರುಬಿಯೇಸಿ ಕುಟುಂಬಕ್ಕೆ ಸೇರಿದ ಸೈಕೋಟ್ರಿಯಾ ಜಾತಿಯ ಈ ಸಸ್ಯಗಳಲ್ಲಿ 1900ಕ್ಕಿಂತ ಹೆಚ್ಚು ಪ್ರಭೇದಗಳಿವೆ ಇವೆಲ್ಲವೂ ಉಷ್ಣವಲಯದ ಕೇಂದ್ರ ಆಫ್ರಿಕಾ ಮತ್ತು ಪ್ಯಾಸಿಫಿಕ್ ಕಾಡಿನಲ್ಲಿ ಕಂಡುಬರುತ್ತವೆ. ಈ ಸಸ್ಯದ ಗಮನಿಸಬಹುದಾದ ಲಕ್ಷಣವೆಂದರೆ ಹಲವು ಪ್ರಭೇದದ ಸಸ್ಯದ ಎಲೆಗಳಲ್ಲಿ ಕಪ್ಪು ಗಂಟುಗಳಿವೆ. ಇದರಲ್ಲಿ ಕೂಡು ಜೀವನವಿರುವ ಬ್ಯಾಕ್ಟೀರಿಯಾಗಳಿವೆ. ಕೆಲವು ಪ್ರಬೇಧಗಳು ಡೈಮಿಥೈಲ್ಟ್ರಿಪ್ಟೋಮೈನ್ ಎಂಬ ರಾಸಾಯನಿಕವನ್ನು ಉತ್ಪಾದಿಸುತ್ತವೆ.

ಅರಣ್ಯನಾಶದಿಂದ ಹಲವಾರು ಪ್ರಭೇದಗಳು ವಿನಾಶದ ಅಂಚು ತಲುಪಿವೆ ಎನ್ನಲಾಗಿದೆ.

■ ಪ್ರಕಾಶ ಎಸ್. ಮನ್ನಂಗಿ